

# ಮಳೆ ಮಂಜಿನ ಹಾಡಲಿ ಕಾಡುವ ಕೋಟೆ

**ಮಹಾರಾಷ್ಟ್ರದ ಡೊನಾಜೆ ಅನ್ನೋ ಪುಟ್ಟ ಹಳ್ಳಿಯಲ್ಲಿರುವ ಸಿಂಹಗಢ ಕೋಟೆಯದ್ದು ದೊಡ್ಡ ಇತಿಹಾಸ. ಮೊಗಲರು, ಮರಾಠರ ಆಡಳಿತದ ತೆಕ್ಕೆಗೆ ಮತ್ತೆ ಮತ್ತೆ ಒಳಗಾಗಿರುವ ಈ ಕೋಟೆ, ವೀರೋದಾತ್ತ ಕಥನಗಳ ಜೊತೆಗೆ ಅಪ್ರತಿಮ ಪ್ರಾಕೃತಿಕ ಸೌಂದರ್ಯದ ಕಾರಣದಿಂದಲೂ ಗಮನಸೆಳೆಯುತ್ತದೆ.**

**■ ಪ್ರಸಾದ್ ಶೆಣೈ ಆರ್.ಕೆ.**

ತ್ಣಣ್ಣಗೆ ಬೀಸಿಬರುವ ತಂಗಾಳಿ, ಬಾನಲ್ಲಿ ಕಪ್ಪಗೆ ತೇಲುವ ಮೋಡಗಳು ಇನ್ನೇನು ತಾನು ಮಳೆ ತಂದೇ ತರುತ್ತೇನೆ ಎಂದು ಹಟಕ್ಕೆ ಬಿದ್ದಂತೆ ಕೆಲವೇ ಕ್ಷಣದಲ್ಲಿ ಮಳೆಹನಿಗಳ ಬಳಗವನ್ನೇ ಹೊತ್ತು ತಂದು ಕೋಟೆಯ ಕಲ್ಲುಗಳ ಮೇಲೆ, ಬುರುಜುಗಳ ಮೇಲೆ, ಉದ್ದಕ್ಕೆ ಹಾಸಿರುವ ಚಪ್ಪಡಿ ಕಲ್ಲುಗಳ ಮೇಲೆ ಕುಣಿಸಿದಂತಾಯಿತು.

ದೂರದಲ್ಲಿ ಆವರೆಗೆ ಬಿಸಿಲಿಗೆ ಹೊಳೆಯುತ್ತಿದ್ದ ಪುಣೆ ಶಹರದ ದೊಡ್ಡ ದೊಡ್ಡ ಕಟ್ಟಡಗಳು, ಐಟಿ ಹಬ್‌ಗಳು, ಒಬ್ಬೊಬ್ಬರ ಕೈಕೈ ಹಿಡಿದು ಆಟಕ್ಕೆ ನಿಂತವರಂತೆ ಕಾಣಿಸುವ ಹಾಗೂ ಆಕಾಶವನ್ನು ನುಂಗಿಬಿಡುತ್ತೇವೆ ಎನ್ನುವ ಅಹಂನಲ್ಲಿ ಬೀಗುತ್ತಿದ್ದ ಬಿಲ್ಡಿಂಗುಗಳೆಲ್ಲಾ ಈ ಕೋಟೆಯ ಕಬಂಧ ಬಾಹುಗಳಲ್ಲಿ ನಿಂತುಬಿಟ್ಟರೆ ಅಕ್ಷರಶಃ ಬಾಲಂಗೋಚಿಗಳಂತೆ ಕಾಣಿಸುತ್ತಿದ್ದವು. ಆದರೆ, ಅವುಗಳನ್ನೂ ಮೀರಿ ಅಷ್ಟ ದಿಕ್ಕುಗಳಲ್ಲೂ ಕಾಣಿಸುತ್ತಿದ್ದ ಮಹಾರಾಷ್ಟ್ರದ ಪಶ್ಚಿಮಘಟ್ಟದ ತಪ್ಪಲುಗಳು ತಮ್ಮ ಪೌರುಷವನ್ನು, ಅಗಾಧತೆಯನ್ನು, ಅನೂಹ್ಯತೆಯನ್ನೂ ನಿಶ್ಚಲವಾಗಿ ನಿಂತು ಕಾಣಿಸುತ್ತಿದ್ದವು.

ಹೇಳಿ ಕೇಳಿ ಇದು ಪಶ್ಚಿಮಘಟ್ಟದ ನಡುವೆ ಧೀರತೆಯಿಂದ ನಿಂತಿರುವ ಕೋಟೆ. ಕೆಲವೊಮ್ಮೆ ಕಂಡೂ ಕಾಣದೆ, ಕೆಲವೊಮ್ಮೆ 'ಅಬ್ಬಾ ಇಷ್ಟೊಂದು ಅಗಾಧತೆ ಇದೆಯಾ ಈ ಕೋಟೆಗೆ' ಎಂದು ನಿಬ್ಬೆರಗಾಗುವಂತೆ ಮಾಡಿಬಿಡುವ ವಿಹಂಗಮ ಕೋಟೆಯಿದು. ಈ ಕೋಟೆಯ ಹೆಸರೇ 'ಸಿಂಹಗಢ ಕೋಟೆ'. ಹೆಸರಿನಲ್ಲೇ ಸಿಂಹದ ಗರ್ಜನೆಯನ್ನು, ಸಿಂಹದ ಘನ ಗಾಂಭೀರ್ಯವನ್ನು, ರೌದ್ರ–ರೋಷ–ಆವೇಶ, ಗತ್ತು, ಮೋಹಕತೆ ಹೀಗೆ ಎಲ್ಲವನ್ನೂ ಒಳಗೊಂಡು ಕಾಡುವ ಕೋಟೆಯೇ ಸಿಂಹಗಢ ಕೋಟೆ. ಮಹಾರಾಷ್ಟ್ರದ ಪುಣೆಯ ಹಾವೇಲಿ ತಾಲ್ಲೂಕಿನ ಡೊನಾಜೆ ಅನ್ನೋ ಪುಟ್ಟ ಹಳ್ಳಿಯಲ್ಲಿರುವ ಐತಿಹಾಸಿಕ ಕೋಟೆಯೇ ಸಿಂಹಗಢ.